ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, "ಗೌಳಿಯರ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ರಿಂದ ೬ರವರೆಗೆ

ಅಧ್ಯಕ್ಷರು.—"ಖಂಡ ೨ರಿಂದ ೬ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟತು

(ಖಂಡ ೨ರಿಂದ ೬ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, "ಗೌಳಿಯರ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "ಗೌಳಿಯರ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಈಗ ಸದನವನ್ನು ಹದಿನೈದು ನಿಮಿಷ ಮುಂದೂಡಿ ಮತ್ತೆ ೫.೩೦ ಗಂಟೆಗೆ ಸೇರುವುದು.

(ಸದನವು ಪುನಃ ೫-೪೫ಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು (ಶ್ರೀ ಟಿ. ಎಸ್. ಕೌಜಲಗಿಯವರು) ಪೀಠವನ್ನಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಮಂತ್ರಿಗಳು ಬರಲಿ ಆಮೇಲೆ ತೆಗೆದುಕೊಳ್ಳೋಣ.

ಮೀನುಮರಿ ಉತ್ಪಾದನಾ ಕೇಂದ್ರದ ಸ್ಥಾಪನೆ.

೨೭೯ (೭೫೨) ಶ್ರೀ ಜಿ. ರಾಜುಗೌಡ(ಹನೂರು) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

(೨) ಮೈಸೂರು ಜಿಲ್ಲೆಯ ಯಾವ ಸ್ಥಳದಲ್ಲಿ ಮೀನುಮರಿ ಉತ್ಪಾದನಾ ಕೇಂದ್ರವನ್ನು ಮಾಡಲಾಗಿದೆ?

(೪) ಅದಕ್ಕಾಗಿ ಬಿಡುಗಡೆ ಮಾಡಿರುವ ಹಣ ಎಷ್ಟು?

ಇ) ಅದ್ದರಿಂದ ಒಂದು ಸಲಕ್ಕೆ ಎಷ್ಟು ವಿಮಾನುಮರಿ ಉತ್ಪಾದನೆ ಮಾಡಲು ಸಾಧ್ಯವಾಗುವುದು?

ಈ) ಒಳನಾಡಿನ ಕೆರೆಗಳಲ್ಲಿ ಎಲ್ಲಾದರೂ ವಿಮಾನು ಸಾಕಬೇಕಾದರೆ ಎಷ್ಟು ವಿಮಾನುಮರಿಗಳು ಬೇಕಾಗುತ್ತದೆ ?

ಉ) ಪ್ರತಿ ಹೋಬಳಿ, ತಾಲ್ಲೂಕು ಮಟ್ಟದಲ್ಲಿ ವಿಮಾನಿನ ಮಾರುಕಟ್ಟೆಯನ್ನು ಸ್ಥಾಪಿಸಲು ಸರ್ಕಾರ ಯೋಚಿಸಿದೆಯೇ ?

ಶ್ರೀ ವಸಂತ ವಿ. ಸಾಲಿಯಾನ (ವಿಮಾನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು).—

ಅ) ಸರ್ಕಾರದ ಸ್ವಾಮ್ಯದ

೧) ಗುಂದಾಲ್	—೧
೨) ಕಬಿನಿ	—೨
೩) ನುಗು	—೧
೪) ಕರಿಮುದ್ದನ ಹಳ್ಳಿಯಲ್ಲಿ	—೧

ಒಟ್ಟು ೫ ವಿಮಾನುಮರಿ ಉತ್ಪಾದನಾ ಕೇಂದ್ರಗಳಿವೆ.

ಆ) ೧) ಗುಂದಾಲ್ ೨) ಕಬಿನಿ	ರೂ.೧೨೦.೪೦ ಲಕ್ಷ
೩) ನುಗು	೧.೫೪ ಲಕ್ಷ
೪) ಕರಿಮುದ್ದನ ಹಳ್ಳಿ	೧೫.೨೧ ಲಕ್ಷ

ಇ) ವರ್ಷಕ್ಕೆ ೧೪೦ ಲಕ್ಷ ಬಿತ್ತನೆ ವಿಮಾನುಮರಿಗಳು.

ಈ) ೧ ಹೆಕ್ಟೇರ್ ನೀರಿನ ಪ್ರದೇಶಕ್ಕೆ ಸುಮಾರು ೨೦೦೦ ದಿಂದ ೩ ಸಾವಿರದವರೆಗೆ ವಿಮಾನುಮರಿಗಳನ್ನು ಬಿತ್ತನೆ ಮಾಡಬಹುದು.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜಗೌಡ.—ಮಾನ್ಯ ಅಧ್ಯಕ್ಷರೆ ಮೈಸೂರು ಜಿಲ್ಲೆಯಲ್ಲಿ ೫ ಮೀನು ಸಾಕಣೆ ಕೇಂದ್ರಗಳನ್ನು ಸ್ಥಾಪಿಸತಕ್ಕ ಉದ್ದೇಶ ಏನಿದೆ ಅದಕ್ಕೆ ಯೋಜನಾ ವೆಚ್ಚ ಎಷ್ಟು ? ಆ ಯೋಜನೆಗೆ ಯಾವಾಗ ಮಂಜೂರಾತಿ ದೊರಕಿದೆ ? ಇಷ್ಟು ಕಾಲ ವಿಳಂಬಕ್ಕೆ ಕಾರಣವೇನು ? ಇದಕ್ಕೆ ಕೇಂದ್ರದ ಅನುದಾನ ಮತ್ತು ರಾಜ್ಯದ ಅನುದಾನ ಎಷ್ಟು ?

ಶ್ರೀ ವಸಂತ ವಿ. ಸಾಲಿಯಾನ.—ಮೈಸೂರು ಜಿಲ್ಲೆಯಲ್ಲಿ ೫ ಮೀನುಮರಿ ಉತ್ಪಾದನಾ ಕೇಂದ್ರಗಳಿವೆ. ಮಾನ್ಯ ಸದಸ್ಯರು ಕೇಳಿದ ರೀತಿಯಲ್ಲಿ ಅದಕ್ಕೆ ೧೫೭ ಲಕ್ಷ ರೂಪಾಯಿ ಮಂಜೂರಾತಿಯಾಗಿದೆ. ಅದರಲ್ಲಿ ೨೨ ಲಕ್ಷ ರೂಪಾಯಿ ಖರ್ಚಾಗಿದೆ. ನಿಧಾನವಾಗಲು ಕಾರಣವೇನೆಂದು ಕೇಳಿದರು. ವಿಕೆಂದರೆ ಮೊದಲು ಈ ಕಾಮಗಾರಿಯನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಕೊಟ್ಟಿತ್ತು. ಆಗ ಅವರು ಮಾಡದೆ ಇದ್ದುದರಿಂದ ಈಗ ಆ ಕೆಲಸವನ್ನು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಕೊಟ್ಟಿದ್ದೇವೆ. ಈ ಕಾರಣ ಸ್ವಲ್ಪ ವಿಳಂಬವಾಯಿತು. ಆದರೆ ಮೈಸೂರು ಜಿಲ್ಲೆಯಲ್ಲಿ ಏನ ಮೀನು ಮರಿ ಉತ್ಪಾದನೆಯಾಗುತ್ತದೆ ಆ ಮಟ್ಟದಲ್ಲಿ ಸುಮಾರು ೧೪೦ ಲಕ್ಷ ಬಿತ್ತನೆ ಮರಿಗಳನ್ನು ಉತ್ಪಾದನೆ ಮಾಡುವ ಶಕ್ತಿ ಆ ೫ ಕೇಂದ್ರಗಳಿಗೆ ಇದೆ. ಸನ್ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಇದು ವಿಳಂಬವಾಗಿದೆ. ಆದರ ಬಗ್ಗೆ ಈಗಾಗಲೇ ನಾನು ಕ್ರಮ ತೆಗೆದುಕೊಂಡಿದ್ದೇನೆ. ಮಾನ್ಯ ಸದಸ್ಯರು ಕೇಂದ್ರದ ಪಾಲಿನ ಬಗ್ಗೆ ಹೇಳಿದರು, ಕೇಂದ್ರದ ಪಾಲು ಅದಕ್ಕೆ ಅನ್ವಯವಾಗುವುದಿಲ್ಲ. ಇದು ಸಂಪೂರ್ಣವಾಗಿ ರಾಜ್ಯದ ಪಾಲಿನಲ್ಲಿ ಮಾಡಿದಂಥ ಕೇಂದ್ರಗಳಾಗಿವೆ.

ಶ್ರೀ ಜಿ. ರಾಜಗೌಡ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ಸಮಂಜಸವಾದ ಉತ್ತರ ಬರಲಿಲ್ಲ. ನಾನು ಕೇಳಿದ್ದುದು ಈ ಯೋಜನೆ ಯಾವಾಗ ಪ್ರಾರಂಭವಾಯಿತು ಎಂದು ಒಟ್ಟು ಯೋಜನಾ ವೆಚ್ಚ ಮೊಬಲಗು ಎಷ್ಟು ಎಂದು. ತಾವು ಖರ್ಚು ಮಾಡಿರುವುದು ಎಷ್ಟು ? ಬಿಡುಗಡೆ ಮಾಡಿರುವುದು ಎಷ್ಟು ? ಬಹುಶಃ ಈ ಯೋಜನೆ ೪–೫ ವರ್ಷಗಳ ಹಿಂದೆಯೇ ಮುಗಿಯ ಬೇಕಾಗಿತ್ತು. ಆದರೆ ಇನ್ನೂ ಮುಗಿಸಿಲ್ಲ. ಇದಕ್ಕೆ ಕಾರಣವೇನು. ವಿಮಾನು ಮರಿಗಳನ್ನು ಇಲ್ಲಿ

ಉತ್ಪಾದನೆ ಮಾಡುತ್ತಿರುವುದರಿಂದ ಒಳನಾಡು ಮೀನುಗಾರರಿಗೆ ಬಹಳ ತೊಂದರೆ ಯಾಗುವುದಿಲ್ಲವೇ ? ಖಾಸಗಿಯವರ ಹತ್ತಿರ ನಾವು ಹೋಗಲಿಕ್ಕೆ ಆಗುತ್ತದೆಯೇ ? ಸರ್ಕಾರದವರು ದುಡ್ಡನ್ನು ಕೊಟ್ಟರೂ ಕೂಡ, ಇದಕ್ಕಾಗಿ ಸುಮಾರು ೫ ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಯೋಜನೆ ಇದ್ದರೂ ಕೂಡ, ತಾವು ಏನು ವೆಚ್ಚವನ್ನು ಮಾಡದೆ ಹಾಗೆಯೇ ಇಟ್ಟಿದ್ದೀರಿ. ಇದುವರೆಗೆ ಹಣವನ್ನು ಬಿಡುಗಡೆ ಮಾಡದೆ ಅದನ್ನು ಬ್ಯಾಂಕಿನಲ್ಲಿ ಇಟ್ಟಿದ್ದೀರಿ. ತಾವು ಏನು ಮೀನುಗಾರಿಕೆಗೇ ಲಾಭ ಸಂಪಾದನೆ ಮಾಡಲಿಕ್ಕೆ ಬಡ್ಡಿಯನ್ನು ಸಂಪಾದನೆ ಮಾಡಲಿಕ್ಕೆ ? ಏತಕ್ಕೆ ಈ ಯೋಜನೆಯನ್ನು ಪೂರ್ಣ ಮಾಡಲಿಲ್ಲ ದಯವಿಟ್ಟು ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡಿ.

ಶ್ರೀ ವಸಂತ ವಿ. ಸಾಲಿಯಾನ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇದನ್ನು ೧೯೭೪ನೇ ಇಸವಿಯಲ್ಲಿ ಸಂಪೂರ್ಣ ಮಾಡಲಾಯಿತು.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಈ ಯೋಜನೆ ೧೯೭೪ರಲ್ಲಿಯೇ ಪ್ರಾರಂಭ ವಾಯಿತು. ಅದು ಇನ್ನೂ ಸಂಪೂರ್ಣವಾಗಿ ಆಗಲಿಲ್ಲ. ದಯವಿಟ್ಟು ಸರಿಯಾಗಿ ಹೇಳಿ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯ ಈ ಯೋಜನೆಯು ೧೯೭೪ನೇ ಇಸವಿಯಲ್ಲಿ ಪ್ರಾರಂಭವಾಗಿ ೧೯೯೧ನೇ ಇಸವಿಯಲ್ಲಿ ಮುಕ್ತಾಯ ಗೊಂಡಿತು. ಆದಾದನಂತರ ಇತ್ತೀಚೆಗೆ ೨೬ ಕೊಳಗಳನ್ನು ನಿರ್ಮಾಣ ಮಾಡಲಿಕ್ಕೆ ಸುಮಾರು ೮೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಆ ಕೆಲಸ ನಡೆಯುತ್ತಿದೆ.

ಶ್ರೀ ಜಿ. ರಾಜುಗೌಡ.—ಸ್ವಾಮಿ, ನಾನು ಕೇಳುತ್ತಿರುವುದು ಪೂರ್ಣ ಯೋಜನಾ ವೆಚ್ಚ ಎಷ್ಟು ? ಮಂಜೂರಾತಿಯಾದ ಹಣವೆಷ್ಟು ? ಕೇವಲ ೧೪೦ ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಈ ಬಿಡುಗಡೆಯಾಗಿರುವ ಹಣದಲ್ಲಿ ಎಷ್ಟು ಖರ್ಚಾಗಿದೆ. ಯೋಜನಾ ವೆಚ್ಚ ಎಷ್ಟು ಕೋಟಿ ಎಂಬುದನ್ನು ದಯವಿಟ್ಟು ತಿಳಿಸಬೇಕು ?

ಶ್ರೀ ವಸಂತ ವಿ. ಸಾಲಿಯಾನ.—ಈಗ ೫ ಕೆರೆಗಳಿಗೆ, ಅಂದರೆ ಗುಂಡಾಲ್ ಕೆರೆಗೆ ಸುಮಾರು ೧೨೬ ಲಕ್ಷದ ೪೦ ಸಾವಿರ ರೂಪಾಯಿಗಳು, ಕಬಿನಿ, ನುಗು—ಇದಕ್ಕೆ ೧ ಲಕ್ಷ ೫೪ ಸಾವಿರ ಟೋಟಲ್ ವೆಚ್ಚ ಸುಮಾರು ೨೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಉತ್ಪಾದನಾ ಕಾರ್ಯವನ್ನು ನಿರ್ವಾಣ ಮಾಡಿದ್ದೇವೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಸಚಿವರಿಗೆ ಒಟ್ಟು ಯೋಜನಾ ವೆಚ್ಚ ಎಷ್ಟು ಎಂದು ನಾನು ಕೇಳುತ್ತಿರತಕ್ಕಂಥದ್ದು. ೪ ಕೋಟಿ ೭೦ ಲಕ್ಷ ರೂಪಾಯಿಗಳು ಯೋಜನಾ ವೆಚ್ಚವೆಂದು ತಿಳಿದು ಬಂದಿದೆ. ದಯವಿಟ್ಟು ತಾವು ಎಷ್ಟನ್ನು ಬಿಡುಗಡೆ ಮಾಡಬೇಕು.

ಶ್ರೀ ವಸಂತ ವಿ. ಸಾಲಿಯಾನ.—ಈ ೫ ಕೇಂದ್ರಗಳಿಗೆ ೨೨ ಲಕ್ಷ ರೂಪಾಯಿಗಳು ಖರ್ಚಾಗಿದೆ ೧೩೭ ಲಕ್ಷ ಮಂಜೂರಾಗಿದೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಸಚಿವರು ಅರ್ಥವನ್ನೇ ಮಾಡಿಕೊಳ್ಳಲಿಲ್ಲ. ನಾನು ಕೇಳುತ್ತಿರುವುದು ಯೋಜನಾ ವೆಚ್ಚ ಪೂರ್ಣವಾಗಿ ಎಷ್ಟು ಎಂದು. ತಾವು ಬಿಡುಗಡೆ ಮಾಡಿರುವ ಹಣವನ್ನು ಹೇಳುತ್ತಿದ್ದೀರೇ ಹೊರತು ಯೊ ಜನಾ ವೆಚ್ಚವನ್ನು ಹೇಳುತ್ತಿಲ್ಲ. ಕೆರೆಗಳ ನಿರ್ಮಾಣ ಮಾಡಬೇಕು. ಎಷ್ಟು ಕೆರೆಗಳ ನಿರ್ಮಾಣ ಮಾಡಬೇಕು ? ಎಷ್ಟು ಎಕರೆ ವಿಸ್ತೀರ್ಣ ಬೇಕು. ಮೀನುಮರಿಗಳನ್ನು ಉತ್ಪಾದನೆ ಮಾಡಲಿಕ್ಕೆ ಕೆರೆಗಳ ನಿರ್ಮಾಣ ಮಾಡಲಿಕ್ಕೆ ಎಷ್ಟಾಗ ತ್ತದೆ. ಮೀನುಮರಿಗಳನ್ನು ಸಾಕಲಿಕ್ಕೆ ಎಷ್ಟು ಹಣ ಖರ್ಚಾಗುತ್ತದೆ, ದಯವಿಟ್ಟು ತಿಳಿಸಿ ?

ಶ್ರೀ ವಸಂತ ವಿ. ಸಾಲಿಯಾನ.—ತಾವು ಕೇಳಿದ ಪ್ರಶ್ನೆ ಈ ರೀತಿ ಇದೆ. ಮೈಸೂರು ಜಿಲ್ಲೆಯಲ್ಲಿ ಎಷ್ಟು ಉತ್ಪಾದನಾ ಕೇಂದ್ರಗಳಿವೆ ಎಂದು ಕೇಳಿದ್ದಕ್ಕೆ ನಾನು ೫ ಉತ್ಪಾದನಾ ಕೇಂದ್ರಗಳಿವೆ ಎಂದು ಹೇಳಿದ್ದೇನೆ. ಅದಾದನಂತರ ಬಿಡುಗಡೆ ಮಾಡಿದ ಹಣದ ವಿಚಾರ ಕೇಳಿರುತ್ತೀರಿ. ಅದಕ್ಕೆ ನಾನು ಹೇಳಿದ್ದೇನೆ ಗುಂಡಾಲ್ ಮತ್ತು ಕಬಿನಿಗೆ ೧೨೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಮತ್ತು ನುಗುವಿಗೆ ೧ ಲಕ್ಷ ೫೪ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು, ಅದೇ ರೀತಿಯಲ್ಲಿ ಕರಿಮಾಂದನಹಳ್ಳಿಗೆ ೧೫ ಲಕ್ಷ ೨೧ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೇನೆ. ಅದಾದನಂತರ ಮೀನು ಮರಿಗಳ ಉತ್ಪಾದನೆಯ ಬಗ್ಗೆ ಕೇಳಿರುವುದಕ್ಕೆ ವರ್ಷ ಒಂದಕ್ಕೆ

೧೦ಳ ಲಕ್ಷ ಮರಿಗಳು ಉತ್ಪಾದನೆ ಈ ಐದು ಕೆರೆಗಳಿಂದ ಆಗುತ್ತದೆಂದು ಹೇಳಿದ್ದೇನೆ. ತಾವು ಕೇಳಿದ ಎಲ್ಲ ಪ್ರಶ್ನೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಬಿಡುಗಡೆಯಾಗಿರುವ ಹಣವೆಲ್ಲ ಖರ್ಚಾಗಿಲ್ಲ. ಬಿಡುಗಡೆಯಾಗಿರುವ ಹಣವೇ ಬೇರೆ, ಖರ್ಚಾಗಿರುವ ಹಣವೇ ಬೇರೆ.

ಶ್ರೀ ವಸಂತ ವಿ. ಸಾಲಿಯಾನ.—ತಾವು ಅದಕ್ಕೆ ಸಂಬಂಧಪಟ್ಟಂತೆ ಬೇರೆ ಪ್ರಶ್ನೆಯನ್ನು ಕೇಳಿದರೆ ನಾನು ಸರಿಯಾದ ಉತ್ತರವನ್ನು ಕೊಡುತ್ತೇನೆ. ಏತಕ್ಕೆಂದರೆ ತಾವು ಕೇಳಿದಂತೆ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಎಷ್ಟು ಉತ್ಪಾದನಾ ಕೇಂದ್ರಗಳಿಗೆ, ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂಬುದನ್ನು ಹೇಳಿದ್ದೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಬಿಡುಗಡೆಯಾಗಿರುವ ಹಣ ಬೇರೆ, ಖರ್ಚಾದ ಹಣ ಬೇರೆ. ಹಣ ನೀವು ಬಿಡುಗಡೆ ಮಾಡಿರುವುದು ೧೪೦ ಲಕ್ಷ ರೂಪಾಯಿಗಳು. ಇದರಲ್ಲಿ ಖರ್ಚು ಎಷ್ಟಾಗಿದೆ ಎನ್ನುವ ಸರಳವಾದ ಪ್ರಶ್ನೆಗೆ ಉತ್ತರವನ್ನು ಕೊಡದಿದ್ದರೆ ಏನು ಮಾಡಲಿ.

ಶ್ರೀ ವಸಂತ ವಿ. ಸಾಲಿಯಾನ. ಮಾನ್ಯ ಅಧ್ಯಕ್ಷರೇ, ಇನ್ನೊಂದು ಸಲ ನಾನು ಹೇಳುತ್ತಿದ್ದೇನೆ, ೧೩೭ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ೫ ಕೆರೆಗಳಿಗೆ ೨೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶಿಗ್ಗಾಂವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

೨೭೬. (೭೮೦) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಶಿಗ್ಗಾಂವ ಆಸ್ಪತ್ರೆ ಪಿ.ಹೆಚ್.ಸಿ.ಯಿಂದ ಸಿ.ಹೆಚ್.ಸಿ.ಗಾಗಿ ಯಾವಾಗ ಪರಿವರ್ತನೆ ಆಗಿದೆ ?

ಆ) ಸಮುದಾಯ ಆರೋಗ್ಯ ಕೇಂದ್ರಕ್ಕೆ ಒದಗಿಸುವ ವೈದ್ಯಾಧಿಕಾರಿಗಳ ಸಿಬ್ಬಂದಿ ಒದಗಿಸಲಾಗುವುದೇ ?

ಇ) ಹಾಗಿದ್ದರೆ ಇನ್ನೂ ಎಷ್ಟು ದಿವಸಗಳಲ್ಲಿ ಒದಗಿಸಲಾಗುವುದು ?

ಈ) ಶಿಗ್ಗಾಂವ ಆಸ್ಪತ್ರೆಯನ್ನು ೭೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಮಾನ್ಯ ಜಿಲ್ಲಾ ಪಂಚಾಯತ್ ಧಾರವಾಡದಿಂದ ಶಿಫಾರಸ್ಸು ಮಾಡಲಾಗಿದೆಯೆ ?

ಉ) ಹಾಗಿದ್ದಲ್ಲಿ ಇನ್ನೂ ಎಷ್ಟು ದಿವಸಗಳಲ್ಲಿ ಸರ್ಕಾರಿ ಆಸ್ಪತ್ರೆ ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ದಿನಾಂಕ ೧೬-೧-೯೯ರ ಸರ್ಕಾರದ ಆಜ್ಞೆಯಲ್ಲಿ ಪರಿವರ್ತನೆ ಆಗಿದೆ.

ಆ) ಒದಗಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಎಪ್ಪತ್ತು ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಜಿಲ್ಲಾಪರಿಷತ್ತಿನಿಂದ ಸರ್ಕಾರಕ್ಕೆ ಇನ್ನೂ ಬಂದು ಸೇರಿಲ್ಲ.

ಉ) ೫೦ ಹಾಸಿಗೆಗೆ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರ ಪರಿಶೀಲಿಸುತ್ತಿದೆ. ಕಾಲಮಿತಿಯನ್ನು ನೀಡಲಾಗದು.

ಶ್ರೀ ಮಂಜುನಾಥ ಸಿ. ಕುನ್ನೂರ.—ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ ಆಸ್ಪತ್ರೆ ಪಿ. ಎಚ್. ಸಿ. ಯಿಂದ ಸಿ. ಎಚ್. ಸಿ. ಯಾಗಿ ಯಾವಾಗ ಪರಿವರ್ತನೆ ಆಯಿತು ಮತ್ತು ಸಮುದಾಯ ಆರೋಗ್ಯ ಕೇಂದ್ರಕ್ಕೆ ಒದಗಿಸುವ ವೈದ್ಯಾಧಿಕಾರಿಗಳ ಸಿಬ್ಬಂದಿಯನ್ನು ಅಲ್ಲಿಗೆ ಒದಗಿಸಲಾಗುವುದೇ ಎಂಬ ಪ್ರಶ್ನೆಗೆ ದಿನಾಂಕ ೧೬ನೇ ಜನವರಿ ೧೯೯೯ರ ಸರ್ಕಾರದ ಆಜ್ಞೆಯಲ್ಲಿ ಪರಿವರ್ತನೆ ಆಗಿದೆ ಮತ್ತು ವೈದ್ಯಾಧಿಕಾರಿ